# ಕನ್ನಡ ಹಾಡಿಗೆ ಏಕ್ತಾ ಬೋಲ್ಡ್

ಯೂಟ್ಯೂಬ್ ಪ್ರಭಾವದಿಂದಾಗಿ ಕನ್ನಡ ಚಿತ್ರವೊಂದರ ಹಾಡು ಬಾಲಿವುಡ್ ಮೇಲೆ ನೇರ ಪರಿಣಾಮ ಬೀರಿದ ಸುದ್ದಿ ಗಾಂಧಿನಗರದ ಓಣಿಗಳಿಂದಲೇ ಹೊರಬರುತ್ತಿದೆ. 'ಜರಾಸಂಧ' ಚಿತ್ರದ 'ಅವರಿವರ ಜೊತೆ ಸೇರದೆ' ಹಾಡನ್ನು ನೋಡಿ ದಂಗಾದ ಧಾರಾವಾಹಿ ಜಗತ್ತಿನ ರಾಣಿ ಎನಿಸಿರುವ ಏಕ್ತಾ ಕಪೂರ್ ತಮ್ಮ ನಿರ್ಮಾಣದ ಹಿಂದಿ ಚಿತ್ರ 'ದರ್ಟಿ ಪಿಕ್ಚರ್'ಗೆ ಆ ಹಾಡು ಚಿತ್ರೀಕರಿಸಿರುವ ಲೊಕೇಷನ್‌ನಲ್ಲೇ ಒಂದು ಹಾಡನ್ನು ಶೂಟ್ ಮಾಡಬೇಕು ಎಂದು ಅಪ್ಪಣೆ ಕೊಡಿಸಿದರಂತೆ. ಬೀದರ್ ಕೋಟೆಯಲ್ಲಿ 'ಜರಾಸಂಧ' ಸಿನಿಮಾಗೆ ಚಿತ್ರೀಕರಿಸಿರುವ ಮಧುರವಾದ ಹಾಡಿಗೆ ಹರ್ಷ ನೃತ್ಯ ಸಂಯೋಜನೆ ಮಾಡಿದ್ದರು. ವಿಜಯ್ ಹಾಗೂ ಪ್ರಣೀತಾ ಹಾಡಿಗೆ ಹೆಜ್ಜೆ ಹಾಕಿದ್ದರು. ನೃತ್ಯಕ್ಕಿಂತ ಹೆಚ್ಚಾಗಿ ಲೊಕೇಷನ್ ಕೇಂದ್ರಿತವಾದ ಆ ಹಾಡು ಬಾಲಿವುಡ್ ನಿರ್ಮಾಪಕಿಯನ್ನು ಸೆಳೆದಿರುವುದು ಅನೇಕರಿಗೆ ಅಚ್ಚರಿಯಾಗಿದೆ. ಸಾಮಾಜಿಕ ಜಾಲತಾಣದಿಂದ ಸಿನಿಮಾ ಮೇಲೆ ಆಗುವ ಪರಿಣಾಮಕ್ಕೆ ಇದು ಒಳ್ಳೆಯ ಉದಾಹರಣೆ.



# 'ದೇವದತ್ತ'ರ ಕನ್ನಡಿಯಲ್ಲಿ...



'ಸೈಕೋ' ಚಿತ್ರದ ಮೂಲಕ ಕನ್ನಡಕ್ಕೊಂದು ಒಳ್ಳೆಯ ಸಸ್ಪೆನ್ಸ್ ಥ್ರಿಲ್ಲರ್ ಕೊಟ್ಟಿದ್ದ ದೇವದಾಸ್ ಮತ್ತೆ ನಿರ್ದೇಶಕನ ಟೋಪಿ ಏರಿಸಿ ನಿಂತಿದ್ದಾರೆ. ಚಿತ್ರದ ಶೀರ್ಷಿಕೆ ಏನು, ಸಂಗೀತ ನಿರ್ದೇಶಕರು ಯಾರು, ನಾಯಕನ ಪಾತ್ರಧಾರಿ ಯಾರು ಮೊದಲಾದ ಪ್ರಶ್ನೆಗಳಿಗೆ ಉತ್ತರ ಕೊಡದಂತೆ ಅವರು ಹೊಸ ಸಿನಿಮಾ ಮುಹೂರ್ತದ ಆಹ್ವಾನ ಪತ್ರಿಕೆ ರೂಪಿಸಿ ಗಮನ ಸೆಳೆದರು. 'ಸೈಕೋ' ವಿಷಯದಲ್ಲಿಯೂ ಅವರು ನಾಯಕ–ನಾಯಕಿಯನ್ನು ಗುಟ್ಟಾಗಿಯೇ ಇಟ್ಟಿದ್ದರು. ಬಿಡುಗಡೆಯಾದ ನಂತರವಷ್ಟೇ ಗುಟ್ಟು ಬಯಲಾದದ್ದು. ಆಗ ರಘು ದೀಕ್ಷಿತ್ ಸಂಗೀತ ನಿರ್ದೇಶಕರಾಗಿ ಸಂಚಲನೆ ಮೂಡಿಸಿದ್ದರು. ಈ ಚಿತ್ರಕ್ಕೂ ಅವರೇ ಮಟ್ಟುಗಳನ್ನು ಹಾಕುತ್ತಾರಾ ಎಂಬ ಸಹಜ ಕುತೂಹಲವಿದೆ. ಪ್ರಶ್ನೆ, ಕುತೂಹಲಗಳಿಗೆಲ್ಲಾ ಕಾಲವೇ ಉತ್ತರ ಕೊಡಲಿದೆ ಎಂಬಂತೆ ದೇವದತ್ತ ಸುಮ್ಮನೆ ನಗುತ್ತಾರೆ. ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವ ಜಾಹೀರಾತಲ್ಲೂ ಅವರು ರಥವೇರಿ ಕುಳಿತಿರುವ ಚಿತ್ರವಷ್ಟೇ ಇದೆ. ಕುಂಭ ರಘುನಾಥ ರೈ ನಿರ್ಮಿಸುತ್ತಿರುವ ಹೊಸ ಚಿತ್ರಕ್ಕೆ ಪಿ.ಎಲ್.ರವಿ ಛಾಯಾಗ್ರಹಣವಿದೆ. ಚಿತ್ರದ ಶೀರ್ಷಿಕೆಗೆ ಕನ್ನಡಿ ನೋಡಿ ಎಂದು ಆಹ್ವಾನ ಪತ್ರಿಕೆಯಲ್ಲಿ ನಮೂದಾಗಿತ್ತು. ಅದಕ್ಕೆ ಅಂಟಿಸಿದ್ದ ತ್ರಿಕೋನಾಕಾರದ ಕನ್ನಡಿ ನೋಡಿದರೆ 'ಇದರಲ್ಲಿ ಕಾಣುವವರು' ಎಂಬ ಬರಹ. ದೇವದತ್ತರ ಕನ್ನಡಿ ಹೇಳುವಂತೆ ಅವರ ಚಿತ್ರದ ಶೀರ್ಷಿಕೆ 'ನಾನೇ', 'ನೀನೇ', 'ನೀವೇ' ಎಂದೇನಾದರೂ ಇರಬಹುದೇ ಎಂಬ ಅಂದಾಜು ಈಗಾಗಲೇ ಶುರುವಾಗಿದೆ.

# ಟ್ವೀಟಪ್ಪ ಸುದೀಪ್



ಸುದೀಪ್ ಕೂಡ ಈಗ ರಮ್ಯಾ ವರಸೆ ತೋರಲಾರಂಭಿಸಿದ್ದಾರೆ. ಅವರು ತಮ್ಮ ಸಿನಿಮಾ ಕುರಿತ ವಿಚಾರಗಳನ್ನು 'ಟ್ವೀಟ್' ಮಾಡತೊಡಗಿದ್ದಾರೆ. ದ್ವಾರಕೀಶ್ ನಿರ್ಮಿಸಿ ನಿರ್ದೇಶಿಸಿರುವ 'ವಿಷ್ಣುವರ್ಧನ' ಚಿತ್ರವು ಡಿಸೆಂಬರ್ 1ರಂದು ಬಿಡುಗಡೆ. ನವೆಂಬರ್ 22ರಂದು ಮಾರುಕಟ್ಟೆಗೆ ಆಡಿಯೋ ಬರಲಿದೆ ಎಂದು ಹರಿಕೃಷ್ಣ ಖಾತರಿಪಡಿಸಿದ್ದಾರೆ. ಬಿಡುಗಡೆ ದಿನಾಂಕ ಹೇಳಿದ್ದು ದ್ವಾರಕೀಶ್ ಮಗ ಯೋಗೀಶ್. ಇಷ್ಟೆಲ್ಲಾ ವಿವರಗಳನ್ನು ಸುದೀಪ್ ಟ್ವಿಟ್ಟರ್ ಮೂಲಕ ಬಹಿರಂಗಪಡಿಸಲು ಹಿಂದಿ ಚಿತ್ರರಂಗದ ನಂಟೂ ಕಾರಣವಿರಬಹುದು ಎನ್ನುವವರಿದ್ದಾರೆ. ಹಿಂದಿಯ 'ರಾ ಒನ್' ಹಾಗೂ ತಮಿಳಿನ '7 ಆಮ್ ಅರಿವು' ಚಿತ್ರಗಳು ದಾಂಗುಡಿ ಇಟ್ಟಲ್ಲಿ ತಮ್ಮ ಚಿತ್ರದ ಗಳಿಕೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಬಹುದು ಎಂಬ ಕಾರಣಕ್ಕೆ ದ್ವಾರಕೀಶ್ 'ವಿಷ್ಣುವರ್ಧನ' ಚಿತ್ರದ ವಿಷಯದಲ್ಲಿ ಸಾವಧಾನದಿಂದ ಯೋಚಿಸುತ್ತಿದ್ದಾರೆ. ಕೆಲವು ವಾರ ತಣ್ಣಗಿದ್ದ ಕನ್ನಡ ಚಿತ್ರೋದ್ಯಮ 'ಜರಾಸಂಧ', 'ವಿಷ್ಣುವರ್ಧನ' ಬಿಡುಗಡೆಯನ್ನು ನಿರೀಕ್ಷೆಯ ನೋಟದಿಂದ ಎದುರು ನೋಡುತ್ತಿದೆ. ಶಶಾಂಕ್, ದ್ವಾರಕೀಶ್, ಸುದೀಪ್ ಮೂವರೂ ಗೆದ್ದಿರುವ ಕುದುರೆಗಳಾದ್ದರಿಂದ ಈ ನಿರೀಕ್ಷೆ ಸಹಜವೇ ಆಗಿದೆ.

■ ವಿಶಾಖ